

ಹೋಗುತ್ತಾ, ನಮ್ಮ ಹಣೆ ಇಷ್ಟು ಮಾತ್ರ ಚಿಕ್ಕದು ಆಗಿರುವುದರಿಂದಲೇ ಬ್ರಹ್ಮನಿಗೆ ಅದರಲ್ಲಿ ವಿದ್ಯೆ ಬಗ್ಗೆ ಸರಿಯಾಗಿ ಬರೆಯಲಾಗಿಲ್ಲವೆಂದೂ, ಆದ್ದರಿಂದಲೇ ನಾವು ಅಷ್ಟು ಜಾಣರಾಗಿಲ್ಲವೆಂದು ಹಳಿದುಕೊಂಡ ನೆನಪು ಈಗಲೂ ಹಸಿರಾಗಿದೆ. ಇಸ್ರೋದಂತಹ ಖ್ಯಾತ ವೈಜ್ಞಾನಿಕ ಸಂಸ್ಥೆಯಲ್ಲಿ ಸೀನಿಯರ್ ಟೆಕ್ನಿಕಲ್ ಅಡ್ವೈಸರ್ ಆಗಿ ಕೆಲಸ ಮುಂದುವರೆಸಿರುವ ನನ್ನಕ್ಕ ಹಾಗೂ ಅರಸು ತಾಂತ್ರಿಕ ಕಾಲೇಜಿನಲ್ಲಿ ಬಯೋಟೆಕ್ನಾಲಜಿ ವಿಭಾಗದ ಮುಖ್ಯಸ್ಥಳಾಗಿ ಬಡ್ತಿ ಪಡೆದಿರುವ ನಾನೂ ಆ ನೆನಪನ್ನು ಒಣಗಿಹೋಗಲು ಬಿಟ್ಟಿದ್ದರೆ ಅಲ್ಲವೇ? ನಮ್ಮ ಯಾವುದೋ ಮಾತಿನ ಎಡೆಯಲ್ಲಿ ನಮ್ಮ 'ಹಣೆಬರಹ' ಬಂದು ಹೋಗುತ್ತದೆ...

ಮನಸ್ಸಿನ ಲಹರಿಯನ್ನು ಅದರ ಇಚ್ಛೆಯಂತೆ ಹರಿಯಬಿಟ್ಟರೆ ವಿಷಯ ಎಲ್ಲಿ ಎಲ್ಲಿಗೋ ಹರಿದು ಹೋಗಿಬಿಡುತ್ತೆ ನೋಡಿ. ಆ ದಿನ ಪ್ರಮೀಳಾಳಿಂದ ಹೊಸ ಹೊಳಹು ಪಡೆದವರಾದ ನಾವು ಶಾಲೆಯಿಂದ ಮನೆಗೆ ಬಂದವರೇ, ನಮ್ಮ ವಿಮಲತ್ತೆ ಪುಟಾಣಿ ಹಣೆಯನ್ನು ತಿದ್ದಿ ಅಗಲ ಮಾಡಿದೆವು.

ಆ ತಿದ್ದಿದ ಚಿತ್ರವನ್ನು ಒಂದು ಆ್ಯಂಗಲ್‌ನಿಂದ ನೋಡಿದರೆ ವಿಮಲತ್ತೆ ಥೇಟ್ ಹೇಮಾಮಾಲಿನಿ! ನಮಗೆ ಆನಂದ ಮತ್ತು ಅಚ್ಚರಿ ಎರಡೂ ಆಗಿತ್ತು. ಅಮ್ಮನ ಬಳಿ, 'ವಿಮಲತ್ತೆ ನೋಡೋಕೆ ಹೇಮಾಮಾಲಿನಿ ರೀತಿ ಇದ್ದಾರಾ?!' ಎಂದು ಕೇಳ್ತಿದ್ವಿ. ಅಮ್ಮ ಮಾತ್ರ ನಮ್ಮ ಹುಚ್ಚಾಟ ನೋಡಿ, 'ಏ ಹೋಗ್ರೆ, ನೀವು ನಿಮ್ಮಿಷ್ಟದ ನಟಿಯ ಚಿತ್ರ ಬರೆದಿದ್ದೀರಿ ಅಷ್ಟೇ. ಆದ್ರೆ ವಿಮಲತ್ತೆ ಆ ಸಿನೆಮಾ ನಟಿಗಿಂತಲೂ ಚೆಂದ' ಎಂದು ಹೇಳಿ ನಮ್ಮನ್ನು ತಬ್ಬಿಬ್ಬುಗೊಳಿಸಿದ್ರು. ನಿಜ ಹೇಳಬೇಕಂದ್ರೆ ನಮ್ಮಿಬ್ಬರಿಗೂ ಹೇಮಾಮಾಲಿನಿ ಎಂದರೆ ಆಗ ಬಹಳ ಹುಚ್ಚು. ವಿಮಲತ್ತೆಯ ಚಿತ್ರವನ್ನು ಹೆಚ್ಚುಕಮ್ಮಿ ಹಾಗೆಯೇ ಬರೆದಿದ್ದೆವು. ಅಮ್ಮ ಅದನ್ನು ಸರಿಯಾಗಿ ಗ್ರಹಿಸಿದ್ರು.

ಹೇಮಾಮಾಲಿನಿ ವಿಚಾರ ಹಾಗಿರಲಿ, ನಿಮಗೆ ನಾವೇಕೆ ವಿಮಲತ್ತೆಯನ್ನು ನೋಡಿರಲಿಲ್ಲ ಎಂದು ಸಂದೇಹ ಆಗಿರಬಹುದು ಅಲ್ವಾ? ಅದಕ್ಕೆ ಒಂದು ವಿಶೇಷ ಕಾರಣವಿದೆ.

ವಿಮಲತ್ತೆ ನಮ್ಮ ತಾಯಿಯ ಅಣ್ಣನ ಹೆಂಡತಿಯ ತಂಗಿ. ಅಂದರೆ ನಮ್ಮ ಸೋದರಮಾವನ ನಾದಿನಿ. ಸಂಬಂಧದಿಂದ ಸ್ವಲ್ಪ ದೂರ. ಹಾಗೇ ದೈಹಿಕವಾಗಿಯೂ ಬಹಳ ದೂರವೇ ಇದ್ದರು. ದೂರ ಅಂದ್ರೆ ತುಂಬಾ ದೂರವೇ. ಆ ಕಾಲಕ್ಕೇ ಬಹಳ ಪೇಟೆ ಪಟ್ಟಣ ತಿರುಗಾಡಿ ಬಂದಿದ್ದ ಕಿಟ್ಟಿಮಾಮ ಸಹ ನೋಡಿರದ ದೂರದ ಮುಂಬೈ ಸಿಟಿಯಲ್ಲಿ ವಿಮಲತ್ತೆ ಇದ್ದಿದ್ದು..! 'ವಿಮಲತ್ತೆ ಈಗ ಎಲ್ಲಿದ್ದಾರೆ?' ಅಂತ ಅಮ್ಮನ ಒಂದು ದಿನ ಕೇಳಿದ್ದಕ್ಕೆ, 'ಮುಂಬೈನಲ್ಲಿ' ಎಂದಿದ್ರು. 'ಮುಂಬೈಯೇ...!' ಎಂದು ಬಾಯಿಬಿಟ್ಕೊಂಡು ಕೇಳ್ತಿದ್ವಿ.